ದಿನಾಂಕ 02-02-2019ರ ಬೆಳಗ್ಗೆ ಮಾನ್ಯ ಪಾಲಿಕೆ ಸದಸ್ಯರು ಹಾಗೂ ವಾರ್ಡ್ ಸಮಿತಿಯ ಅಧ್ಯಕ್ಷರಾದಂತಹ ಶ್ರೀ.ಎನ್.ಮಂಜುನಾಥ ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿಯ ಸಭೆಯ ನಡಾವಳಿಗಳು

ಹಾಜರಿದ್ದವರು:

| ಕ್ರ.ಸಂ | ಅಧ್ಯಕ್ಷರು, ಸದಸ್ಯರು ಹಾಗೂ ಅಧಿಕಾರಿಗಳ ಹೆಸರು | ವರ್ಗ | ಹಾಜರಿದ್ದವರು/ ಗೈರುಹಾಜರಿ |
|---|---|---|---|
| 1. | ಶ್ರೀ. ಎನ್. ಮಂಜುನಾಥ್ ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ನಂ.87 | ಅಧ್ಯಕ್ಷರು | ಹಾಜರಿದ್ದರು |
| 2. | ಶ್ರೀ. ಶ್ರೀನಿವಾಸ ಮೂರ್ತಿ | ಸದಸ್ಯರು | ಹಾಜರಿದ್ದರು |
| 3. | ಶ್ರೀಮತಿ. ಶಾಲಿನಿ | ಸದಸ್ಯರು | ಗೈರುಹಾಜರಿ |
| 4. | ಶ್ರೀಮತಿ. ರೀನಾ | ಸದಸ್ಯರು | ಗೈರುಹಾಜರಿ |
| 5. | ಶ್ರೀಮತಿ. ಡೈಸಿ ಷನ್ಮುಗಂ | ಸದಸ್ಯರು | ಹಾಜರಿದ್ದರು |
| 6. | ಶ್ರೀ. ಮುರುಗನ್ | ಸದಸ್ಯರು | ಹಾಜರಿದ್ದರು |
| 7. | ಶ್ರೀ. ಇಪ್ತಿಯಾರ್ | ಸದಸ್ಯರು | ಹಾಜರಿದ್ದರು |
| 8. | ಫಿಲಿಕ್ಸ್ ಲಾರೆನ್ಸ್ | ಸದಸ್ಯರು | ಹಾಜರಿದ್ದರು |
| 9 | ಡಿ. ಕೃಷ್ಣಪ್ಪ | ಸದಸ್ಯರು | ಗೈರುಹಾಜರಿ |
| 10 | ಸೂರ್ಯಪ್ರಕಾಶ್ | ಸದಸ್ಯರು | ಹಾಜರಿದ್ದರು |
| 11 | ಲಕ್ಷ್ಮಣ್ ರಾಜ್ | ಸದಸ್ಯರು | ಹಾಜರಿದ್ದರು |
| 12 | ಶ್ರೀ. ಎಸ್.ಪಿ ರವಿರಾಜ್ | ಸ.ಅ /ಕಾರ್ಯದರ್ಶಿ | ಹಾಜರಿದ್ದರು |
| 13. | ಶ್ರೀ. ಲೋಕೇಶ್ | ಸ.ಕಾ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದರು |
| 14 | ಶ್ರೀ. ಯಶವಂತ್ | ಸ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದರು |
| 15 | ಶ್ರೀ. ಕೃಷ್ಣ ಪೂಜಾರಿ | ಹಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿದ್ದರು |
| 16 | ಶ್ರೀ ರಮೇಶ್ | ಕಂದಾಯ ಪರಿವೀಕ್ಷಕರು | ಹಾಜರಿದ್ದರು |

ಮಾನ್ಯ ಪಾಲಿಕೆ ಸದಸ್ಯರು ಹಾಗೂ ವಾರ್ಡ್ ಸಮಿತಿಯ ಅಧ್ಯಕ್ಷರು ರವರು ವಾರ್ಡ್ ಸಮಿತಿಯ ಎಲ್ಲಾ ಕಾರ್ಯದರ್ಶಿಯವರು ಮತ್ತು ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

1. ಸದಸ್ಯರಾದ ಇಪ್ತಿಯಾರ್ ರವರು ಮಸೀದಿ ಹಿಂಭಾಗ ಕೈರಳೀ ಸ್ಕೂಲ್ ರಸ್ತೆ ಕೃಷ್ಣಾ ಅಪಾರ್ಟ್‌ಮೆಂಟ್ ರಸ್ತೆಯಲ್ಲಿನ ಕಸದ ಸಮಸ್ಯೆ ನಿವಾರಿಸುವ ಬಗ್ಗೆ ಪ್ರಸ್ತಾಪಿಸಿದರು. ಈ ಕುರಿತಂತೆ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡಿನಲ್ಲಿ ಪೌರ ಕಾರ್ಮಿಕರು ಕಸ ಸಂಗ್ರಹಣೆ ವಾಹನಗಳು/ಕೊರತೆ ಇರುವ ಬಗ್ಗೆ ಸಭೆಗೆ ತಿಳಿಸಿದರು. ಹಾಗೂ ಕಸ ಸಮಸ್ಯೆ ನಿವಾರಿಸಲು ಅಗತ್ಯ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

ಕ್ರಮ: ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು

Scanned by CamScanner

2. ಅಧ್ಯಕ್ಷರಾದ ಶ್ರೀ. ಎನ್. ಮಂಜುನಾಥ ರವರು ಗುಜರಿ ರಸ್ತೆ ಅನ್ನಸಂದ್ರ ಪಾಳ್ಯ ಮುಖ್ಯ ರಸ್ತೆ (ಅಶ್ರರಫ್) ಇಸ್ಲಾಂಪುರ ಪಾದಚಾರಿ ಮಾರ್ಗ ಒತ್ತುವರಿ ಮಾಡಿರುವ ಬಗ್ಗೆ ಪ್ರಸ್ತಾಪಿಸಿದರು. ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಪಾಲಿಕೆ ಮತ್ತು ಪೋಲೀಸ್ ಇಲಾಖೆಯ ಸಹಯೋಗದಿಂದ ಜಂಟಿ ಕಾರ್ಯಾಚರಣೆಯನ್ನು ಹಮ್ಮಿಕೊಳ್ಳುವುದಾಗಿ ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದರು.

ಕ್ರಮ: ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ
ಸಹಾಯಕ ಅಭಿಯಂತರರು ವಾರ್ಡ್ ನಂ. 87

3. ಸದಸ್ಯರಾದ ಶ್ರೀ. ಲಕ್ಷ್ಮಣರಾಜು ರವರು ರಮೇಶ್ ನಗರ ಬೀದಿಗಳ ಸ್ವಚ್ಛತೆ ಸಮರ್ಪಕವಾಗಿಲ್ಲದಿರುವ ಬಗ್ಗೆ ಪ್ರಸ್ತಾಪಿಸಿದರು. ಈ ಕುರಿತಂತೆ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡಿನಲ್ಲಿ ಪೌರ ಕಾರ್ಮಿಕರು ಕಸ ಸಂಗ್ರಹಣೆ ವಾಹನಗಳು/ಕೊರತೆ ಇರುವ ಬಗ್ಗೆ ಸಭೆಗೆ ತಿಳಿಸಿದರು. ಹಾಗೂ ಕಸ ಸಮಸ್ಯೆ ನಿವಾರಿಸಲು ಅಗತ್ಯ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

ಕ್ರಮ: ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು

4. ಅಧ್ಯಕ್ಷರಾದ ಶ್ರೀ. ಎನ್. ಮಂಜುನಾಥ ರವರು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಪ್ರಸ್ತಾಪಿಸಿದರು. ಈ ಕುರಿತಂತೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ವಾರ್ಡಿನಲ್ಲಿ ವಿವಿಧ ಸ್ಥಳಗಳಲ್ಲಿ ನೀರು ಪೂರೈಕೆ ನಿಯಂತ್ರಕ ವಾಲ್ವ್‌ಗಳ ಅಳವಡಿಕೆ ಮತ್ತು ದುರಸ್ಥಿ ಕಾರ್ಯಗಳು ಪ್ರಗತಿಯಲ್ಲಿರುವುದರಿಂದ ಕಾಮಗಾರಿಗಳು ಪೂರ್ಣಗೊಂಡ ನಂತರ ಸಮರ್ಪಕ ಕುಡಿಯುವ ನೀರಿನ ಸರಬರಾಜಿಗೆ ಕ್ರಮವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

ಕ್ರಮ: ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ

5. ಸದಸ್ಯರಾದ ಶ್ರೀಮತಿ. ಡೈಸಿ ಷಣ್ಮುಗಂ ರವರು ಅನ್ನಸಂದ್ರ ಪಾಳ್ಯ ಮುಖ್ಯ ರಸ್ತೆ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ರಸ್ತೆ ಅಗೆತ ಮಾಡಿರುವುದನ್ನು ದುರಸ್ಥಿ ಪಡಿಸುವ ಬಗ್ಗೆ ಪ್ರಸ್ತಾಪಿಸಿದರು. ಈ ಕುರಿತಂತೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ವಾರ್ಡಿನಲ್ಲಿ ದುರಸ್ಥಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಕೂಡಲೇ ದುರಸ್ಥಿ ಕಾಮಗಾರಿಯನ್ನು ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಬಿ.ಡಬ್ಲ್ಯೂ.ಎಸ್.ಎಸ್.ಬಿ

Scanned by CamScanner

6. ಸದಸ್ಯರಾದ ಶ್ರೀ.ಲಕ್ಷ್ಮಣರಾಜು ರವರು ಆಸ್ತಿಗಳ ಖಾತಾ ವಿತರಣೆ, ಮತದಾರರ ಗುರುತಿನ ಚೀಟಿ ವಿತರಣೆ, ಕೆಲಸಗಳು ವಿಳಂಬವಾಗುತ್ತಿರುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು. ಹಾಜರಿದ್ದ ಕಂದಾಯ ಪರಿವೀಕ್ಷಕರು ರವರು ಈ ಬಗ್ಗೆ ಅಗತ್ಯ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

ಸಹಾಯಕ ಕಂದಾಯ ಅಧಿಕಾರಿ
ವಾರ್ಡ್ ನಂ. 87

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕರಡು ಟಿಪ್ಪಣಿ ಮಾನ್ಯ ಅಧ್ಯಕ್ಷರಿಂದ ಅನುಮೋದಿಸಲ್ಪಟ್ಟಿದೆ.

ವಾರ್ಡ್ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್‌ನಂ. 87.

ಪ್ರತಿಗಳು:

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ,ಮಹದೇವಪುರ ವಲಯ ರವರ ಘನ ಅವಗಾಹನೆಗಾಗಿ
2. ಮಾನ್ಯ ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಘನ ಅವಗಾಹನೆಗಾಗಿ
3. ಕೌನ್ಸಿಲ್ ಕಾರ್ಯದರ್ಶಿಯವರು, ಬಿ.ಬಿ.ಎಂ.ಪಿ. ಕೇಂದ್ರ ಕಛೇರಿ ರವರ ಘನ ಅವಗಾಹನೆಗಾಗಿ
4. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ. ಕೆ.ಆರ್.ಪುರ ವಿಭಾಗ ರವರ ಅವಗಾಹನೆಗಾಗಿ
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎ.ಎಲ್ ಏರ್‌ಪೋರ್ಟ್ ಉಪ ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಕಛೇರಿ ಪ್ರತಿ.

Scanned by CamScanner